ಕಳೆದುಕೊಳ್ಳುತ್ತದೆ.

ನೂರಾರು ಮೈಲಿ ಪಯಣಿಸುವ ನದಿಯೆಲ್ಲಿ?.. ಇದ್ದಲ್ಲೇ ಇದ್ದು ತನ್ನ ಸದ್ದು, ಗದ್ದಲದಿಂದ, ತನ್ನ ಆರ್ಭಟದಿಂದ ರಾಜ ಎನ್ನಿಸಿಕೊಳ್ಳುವ ಸಮುದ್ರವೆಲ್ಲಿ?

* * *

ದಾಹ ತಣಿಸುವ, ಜೀವ ನೀಡುವ ನೂರಾರು ನದಿಗಳನ್ನು ತನ್ನ ಒಡಲಿಗೆ ಸೇರಿಸಿಕೊಂಡು ಅಟ್ಟಹಾಸ ಗೈಯ್ಯುವ ಸಮುದ್ರಕ್ಕೆ, ತನ್ನಲ್ಲಿ ಒಂದಾದರೂ, ಮತ್ತೆ ಮತ್ತೆ ಹೊಸದಾಗಿ ಹುಟ್ಟು ಪಡೆಯುವ ನದಿಗಳ ಬಗ್ಗೆ ಏನು ಗೊತ್ತು?... ಬೆಟ್ಟದ ಬುಡದಲ್ಲಿ, ಬೆಟ್ಟದ ತುದಿಯಲ್ಲಿ, ಸಂದುಗೊಂದಿಗಳಲ್ಲಿ, ಕಾಡಿನ ಹಸುರಿನ ಮಧ್ಯೆ... ಗರ್ಭ ಧರಿಸಿ ಮತ್ತೆ ಮತ್ತೆ ಉಗಮಿಸುವ, ಕಳೆದು ಕೊಂಡಿದ್ದನ್ನು ಲೆಕ್ಕಿಸದೆ, ಮತ್ತೆ ಜೀವ ತಳೆದು ಹರಿಯುವ ನದಿಯ ಸೌಂದರ್ಯ ಸಮುದ್ರಕ್ಕೆ ಏನು ಗೊತ್ತು?... ಗೊತ್ತಾದ ದಿನ ಅದರ ಆರ್ಭಟ ನಿಲ್ಲುತ್ತದೇನೋ ಕಡಲಿನ ಸೆಳೆತ ನದಿಗೇ ಮೀರಲಾಗಿಲ್ಲ... ಇನ್ನು ಮನುಷ್ಯರ ಪಾಡೇನು ಅಲೆಗಳೊಂದಿಗೆ ಆಡುತ್ತಾ... ದೂರದ ದಿಗಂತ ನೋಡುತ್ತಾ ಮುಳುಗುವ ಅಥವಾ ಹುಟ್ಟುವ ಸೂರ್ಯನನ್ನು ನೋಡುತ್ತಾ... ಕಪ್ಪೆ ಚಿಪ್ಪು ಆರಿಸುತ್ತಾ...

ಅಯ್ಯೋ...

ಅಲೆಗಳ ಹೊಡೆತಕ್ಕೆ ಜಾರಿದ ಪಾದ ಹಿಡಿದುಕೊಳ್ಳಲು ಕೈಗೆ ಏನೂ ಸಿಗದೆ... ಬಿದ್ದಂತೆ ಅನ್ನಿಸಿ ಚೀರಿ ಕಣ್ಣು ಬಿಟ್ಟೆ... ಸುತ್ತಲ ಕೋಣೆ ಅರಿವಾಗಲು ಒಂದೆರಡು ನಿಮಿಷ ಬೇಕಾಯಿತು.

ಸಮುದ್ರವೂ ಇಲ್ಲ... ಮರಳೂ ಇಲ್ಲ... ನದಿಯೂ ಇಲ್ಲ... ಎಲ್ಲಾ ಕನಸು, ಭ್ರಮೆ... ಬಿದ್ದಂತೆ ಅನ್ನಿಸಿದ್ದು ಮಾತ್ರ ಸತ್ಯ... ಹೆದರಿಕೆ ಎಂದು ಕೋಣೆಯ ಲೈಟ್ ಹಾಕಿಯೇ ಮಲಗಿದ್ದು... ಸಮಯವೇನೋ.... ಅರಿವಾಗುವುದಿಲ್ಲ... ಎದ್ದು, ಟೇಬಲ್ ಮೇಲೆ ಇರಿಸಿದ್ದ ಮೊಬೈಲನ್ನು ಕೈಗೆ ತೆಗೆದುಕೊಂಡು ಸಮಯ ನೋಡಿದೆ... ಏಳೂವರೆ.....!.....

ನಿಮ್ಮ ಕೈಲಿ ಈ ಚೀಪ್ ಮೊಬೈಲ್ ನೋಡಿದ್ರೆ ನಿಮ್ಮ ಯಜಮಾನರು ಸುಮ್ಮನಿರ್ತಾರಾ?.. ತಕ್ಷಣ ಹೋಗಿ ಒಂದು ಸ್ಮಾರ್ಟ್ ಫೋನ್ ತಂದುಕೊಡ್ತಾರೆ.. ಎಂದಿದ್ದ ವಿಶ್ವಾಸ್...

ಅವರದೇ ಪ್ರಪಂಚದಲ್ಲಿ ಮುಳುಗಿದ್ದ ವಿಕ್ರಂಗೆ ನನ್ನ ಕೈ ನಲ್ಲಿ ಎಂತಹ ಮೊಬೈಲ್ ಇದೆ ಎಂದು ನೋಡುವ ವ್ಯವಧಾನವೆಲ್ಲಿ?...

ಏನು ಸದ್ದು?... ಮೆಲ್ಲನೆ ಕಿಟಕಿಯ ಬಳಿ ಹೋಗಿ ಹೊರಗೆ ಇಣುಕಿದೆ...

ಅಯ್ಯೋ.. ಈ ಫ್ಲಾಟಿನ ಕಾಲಿಂಗ್ ಬೆಲ್ಲು..! ಬಾಗಿಲಿನಾಚೆ ನಿಂತಿರುವವ ಈ ಬಿಲ್ಡಿಂಗಿನ ವಾಚ್‌ಮನ್...

ಮೆಲ್ಲನೆ ಬಾಗಿಲು ತೆಗೆದು ಅವನತ್ತ ಹುಬ್ಬೇರಿಸಿದೆ... ಹಿಂದಿ, ಮರಾಠಿ ನನಗೆ ಬರಲ್ಲ... ಕನ್ನಡ, ಇಂಗ್ಲಿಷ್ ಅವನಿಗೆ ಬರಲ್ಲ...

‘ಆಪ್ ಚಲಿಯೇ ಅಬ್...’ ದನಿ ಬಂದತ್ತ ಬೆಚ್ಚಿ ತಿರುಗಿದೆ... ವಿಕ್ರಂ ಅವರ ಹಿಂದೆ ಅವರ ಚೇಲಾ ರಂಗಸ್ವಾಮಿ!

ಹಲ್ಲು ಕಿರಿದು ವಾಚ್‌ಮನ್ ಹೊರಟು ಹೋದ...

‘ಒಳಗೆ ನಡಿ.... ಹೊರಗೆ ಮಾತು ಬೇಡ...’

ಹಿಂದಕ್ಕೆ ಹೆಜ್ಜೆ ಹಾಕುತ್ತಾ ಒಳಗೆ ನಡೆದೆ. ಅವರಿಬ್ಬರೂ ಒಳಗೆ ಬಂದು ಬಾಗಿಲು ಹಾಕಿದರು.

‘ಅವನಿದ್ದಾನಾ?...’

‘ಯಾರು?..’ ಉಗುಳು ನುಂಗಿದೆ.

‘ಮಳ್ಳಿ ಮಳ್ಳಿ ಮಂಚಕ್ಕೆ ಎಷ್ಟು ಕಾಲು ಅಂದರೆ ಮೂರು ಮತ್ತೊಂದು ಅಂದಳಂತೆ... ಅಂತ ನಮ್ಮಜ್ಜಿ ಒಂದು ಗಾದೆ ಹೇಳ್ತಾ ಇರ್ತಾರೆ... ಅದು ನಿಂಗೆ ಹೊಂದುತ್ತೆ ನೋಡು, ಏನೂ ಗೊತ್ತಾಗೊಲ್ಲ ಅಂತಿದ್ದರೆ ಯಾವನ್ದೋ ಹಿಂದೆ ಓಡಿ ಬರೋಷ್ಟು ಮಾನಗೇಡಿನಾ ನೀನು?..’

ಏನು ಹೇಳಬೇಕು ಎಂದು ತೋಚದೆ ಕಣ್ಣರಳಿಸಿ ಅವರತ್ತಲೇ ನೋಡುತ್ತಾ ನಿಂತೆ...

‘ನೀನೆ ಒಂದು ಹೆಜ್ಜೆ ಒಳಗೆಲ್ಲಾ ಹೋಗಿ ನೋಡು... ಬಚ್ಚಿಟ್ಟು ಕೊಂಡಿರಬೇಕು... ಬಚ್ಚಲು ಮನೆ, ಮಂಚದ ಕೆಳಗೆ ಸರಿಯಾಗಿ ನೋಡು..’ ರಂಗಸ್ವಾಮಿಗೆ ಹೇಳಿದರು ಇವರು.

ರಂಗಸ್ವಾಮಿ ನನ್ನ ದಾಟಿ ಒಳಗೆ ಹೋದಾಗ ತಡೆಯಲು ತೋಚಲಿಲ್ಲ...

‘ಅರಮನೆ!.. ಅರಮನೆಯಲ್ಲಿ ನೆತ್ತಿಯಿಂದ ಉಂಗುಷ್ಟದವರೆಗೆ ಬಂಗಾರದ ಒಡವೆ ಮಾಡಿಸಿ ರಾಣಿಯ ಹಾಗೆ ಇಟ್ಟುಕೊಂಡಿದ್ದೆ.. ಅದೆಲ್ಲಾ ಬಿಟ್ಟು.. ಬೊಂಬೆ ಮಾಡೋದು ಹೇಳಿ ಕೊಡೋನ ಹಿಂದೆ ಈ ಅಂಗೈ ಅಗಲ ಫ್ಲಾಟಿಗೆ ಬಂದಿದ್ದೀಯಲ್ಲಾ... ನಿಂಗೆ ಜ್ಞಾನ ಇದೆಯಾ?... ಇನ್ನೊಬ್ಬನ ಸಂಗ ಬೇಕಿದ್ದರೆ ಹೇಳಬೇಕಿತ್ತು... ನಾನೇ ಅದಕ್ಕೂ ಏರ್ಪಾಡು ಮಾಡುತ್ತಿದ್ದೆ...’

‘ನಿಲ್ಲಿಸ್ತಿರಾ?...’ ದನಿ ಎತ್ತರಿಸಿ ಕೂಗಿದೆ.

‘ಛೀ... ಎಷ್ಟು ಹೊಲಸಾಗಿ ಮಾತಾಡ್ತೀರಿ.. ಅಸಹ್ಯ ಆಗಲ್ಲಾ?’ ಕೋಪ, ದುಃಖ.. ಅಸಹಾಯಕತೆ...

‘ಮಾಡಿರುವ ನಿಂಗೆ ಇರದ ಅಸಹ್ಯ ಮಾತಾಡುವ ನಂಗೆ ಆಗಬೇಕಾ? ನೀವು ಹೋಗಿಲ್ಲವೇ ಬೇರೆ ಹೆಂಗಸರ ಹಿಂದೆ ಅನ್ನಬೇಡ...’

‘ಹುಶ್... ಅನ್ನುವುದೂ ಇಲ್ಲ... ನೀವು ಬೇರೆ ಹೆಂಗಸರ ಹಿಂದೆ ಹೋದ್ರಿ ಅದಕ್ಕೆ ನಾನು ವಿಶ್ವಾಸನ ಸ್ನೇಹ ಮಾಡಿದೆ ಎಂದು ಖಂಡಿತಾ ಹೇಳುವುದಿಲ್ಲ... ಅದೇ ಕಾರಣವಾಗಿದ್ದರೆ ನಾನು ಹತ್ತು ವರ್ಷದ ಹಿಂದೆ ಬೇರೆ ಸಂಬಂಧ ಇರಿಸಿಕೊಳ್ಳಬೇಕಿತ್ತು... ನಿಮಗೆ ಹೇಳಿದ್ದೆ... ನಾನು ಮನೆ ಬಿಟ್ಟು ಹೋಗುತ್ತೇನೆ. ಎಂದು. ಗೊತ್ತಿದ್ದೂ ಯಾಕೆ ಈ ರಂಪ?...’

‘ಏನೋ ಅಮ್ಮನ ಮನೆಗೆ ಹೋಗ್ತಾ ಅಂದುಕೊಂಡೆ..’

‘ಯಾರೂ ಇಲ್ಲ ಸರ್...’ ರಂಗಸ್ವಾಮಿ ಬಂದು ಅವರ ಹಿಂದೆ ನಿಂತ. ಗಂಡ ಹೆಂಡತಿ ಮಾತನಾಡುತ್ತಿದ್ದಾರೆ. ತಾನು ಹೊರಗಿರಬೇಕು ಎನ್ನುವ ಪರಿಜ್ಞಾನವೂ ಇಲ್ಲದ ಪ್ರಾಣಿ.

‘ನಿಮ್ಮ ಅಮ್ಮ ನಿನ್ನ ಸೇರಿಸೊಲ್ಲ... ಎಲ್ಲಿಗೆ ಹೋಗ್ತಾ ಅಂತ ನೀವೇ ಹಾಸ್ಯ ಮಾಡಿದ್ರಿ!... ಬಿಡಿ... ಮಾತು ಬೇಡ... ನಿಮ್ಮ ಅರಮನೆ, ನೀವು ಕೊಟ್ಟ ಚಿನ್ನದಾಭರಣಗಳನ್ನೆಲ್ಲಾ ನಿರಾಕರಿಸಿ ಬಂದಿದ್ದೇನೆ. ನನ್ನ ಬದುಕು ನಾನು ಕಟ್ಟಿಕೊಳ್ಳುತ್ತೇನೆ... ಒಂಟಿಯಾಗಿಯೋ ವಿಶ್ವಾಸನೊಂದಿಗೋ.... ನಿಮಗ್ಯಾಕೆ?... ಟಿ.ವಿ.ಯಲ್ಲಿ ಹೆಂಡತಿಯನ್ನು ಹುಡುಕಿಕೊಡಿ ಎನ್ನುವ ನಾಟಕವೇಕೆ?... ನಿಮ್ಮ ಎಲೆಕ್ಷನ್ ಮುಗಿದ ಮೇಲೆ ನಾನು ಹೋಗ್ತೀನಿ ಎಂದು ಹೇಳಿರಲಿಲ್ಲವೇ ನಾನು?... ’

‘ಹೇಳಿದ್ದರೆ?.. ಊರಿಗೆ ಊರೇ ನನ್ನ ಹಿಂದೆ ಹಾಸ್ಯ ಮಾಡಿಕೊಂಡು ನಗ್ತಾ ಇದೆ. ಮನೆಯಲ್ಲಿ ಹೆಂಡತಿಯನ್ನು ಅಂಕೆಯಲ್ಲಿ ಇಟ್ಟುಕೊಳ್ಳದವನು... ನಾಳೆ ಗೃಹಮಂತ್ರಿಯಾದರೆ ಏನು ಮಾಡುತ್ತಾನೆ ಅಂತ...’ ಗಡಸು ದನಿ..

‘ಅದಕ್ಕೂ ಇದಕ್ಕೂ ಸಂಬಂಧವೇನು?... ನೀವು ರಾಜಕೀಯಕ್ಕೆ ಹೋದರೆ ನಾನು ಬಿಡುತ್ತೇನೆ, ಹೊರಟು ಹೋಗುತ್ತೇನೆ ಎಂದೇ ಹೇಳುತ್ತಿದ್ದೆ... ಈಗ ಅದೇ ರಾಜಕೀಯಕ್ಕೆ ನಾನು ನಿಮ್ಮೊಂದಿಗೆ ಇರಲೇಬೇಕು ಎನ್ನುವುದು ಅನ್ಯಾಯ... ಬಿಡಿ ನಾಲ್ಕು ದಿನ ಜನ ಮಾತಾಡುತ್ತಾರೆ... ಆಮೇಲೆ ಸುಮ್ಮನಾಗುತ್ತಾರೆ... ’

‘ಅವನು ಎಲ್ಲಿಗೆ ಹೋದ?... ಬೆಂಗಳೂರಿಗಾ?..’

ರಂಗಸ್ವಾಮಿ, ಪೊಲೀಸ್ ಕಮೀಷನರ್‌ಗೆ ಫೋನ್ ಮಾಡು.... ಆ ಮನೆ ಹಾಳನ್ನ ಅರೆಸ್ಟ್ ಮಾಡಲಿ... ’

‘ಅರೆ... ಅವರನ್ಯಾಕೆ ಅರೆಸ್ಟ್ ಮಾಡಬೇಕು?’ ಚೀರಿದೆ.

‘ನಮ್ಮ ಲಾ ಇರೋದೇ ಹಾಗೆ ಬೇರೆಯವರ ಹೆಂಡತಿಯ ತಲೆಕೆಡಿಸಿ ಹೀಗೆ ಮನೆ ಬಿಟ್ಟು ಬರುವಂತೆ ಮಾಡಿದರೆ ಆ ಗಂಡಿಗೆ ಶಿಕ್ಷೆಯಿದೆ...’

‘ಅಯ್ಯೋ ವಿಶ್ವಾಸನದೇನು ತಪ್ಪಿಲ್ಲ... ಪಾಪ’

‘ಏನು ಪಾಪ?.. ನಮ್ಮ ಮನೆಗೆ ನಾನಿಲ್ಲದಾಗ ಬೆಡ್‌ರೂಮ್‌ವರೆಗೂ ಬರಲಿಲ್ಲವೇ?.. ನಿನಗೆ ಮೊಬೈಲ್ ಫೋನ್ ಪ್ರೆಸೆಂಟ್ ಮಾಡಲಿಲ್ಲವೇ?... ಅವನು ಇಳಿದುಕೊಂಡಿದ್ದ ಹೋಟೆಲ್ಲಿನ ಮ್ಯಾನೇಜರ್ ರೂಮಿನಲ್ಲಿ ನೀವಿಬ್ಬರು ಒಟ್ಟಿಗಿದ್ದದ್ದು ಸುಳ್ಳೇ?... ಬೊಂಬೆ ಮಾಡುವುದು ಹೇಳಿಕೊಡುತ್ತಿದ್ದ ಶಾಲೆಯ ಕಾಂಪೌಂಡಿನಲ್ಲಿ ನೀವಿಬ್ಬರು ಚೆಲ್ಲಾಟ ಆಡಿದ್ದು ಸುಳ್ಳೆ?.. ನಮ್ಮ ಮನೆಯಲ್ಲಿಯೇ ನನ್ನ ಮಕ್ಕಳೊಂದಿಗೆ ಅವನು ಕ್ರಿಕೆಟ್ ಆಡಿದ್ದು ಸುಳ್ಳೆ?.. ನಾಟಕೀಯವಾಗಿ ನನ್ನ ಅಜ್ಜಿ, ಅಮ್ಮನಿಗೆ ನಮಸ್ಕಾರ ಬೇರೆ ಮಾಡಿದ್ನಂತೆ?... ನನ್ನ, ನನ್ನ ಮನೆಯಲ್ಲಿ ನನ್ನ ಹೆಂಡತಿ ಕೈಲಿ ಕಾಫಿ ಮಾಡಿಸಿಕೊಂಡು ಕುಡಿದು ನಾಟಕದ ಮಾತುಗಳನ್ನಾಡಿ ಅವಳನ್ನು ಎಗರಿಸಿಕೊಂಡು ಹೋದವನದೇನು ತಪ್ಪಿಲ್ಲವೇ? ಅವನು ಸಾಯುವವರೆಗೂ ಜೈಲಿನಲ್ಲಿ ಕೊಳೆಯಬೇಕು ಹಾಗೆ ಮಾಡುತ್ತೇನೆ.....’

‘ವಿಕ್ರಂ..’ ಚೀರಿದೆ.

‘ಏನು?.. ಏನು? ವಿಕ್ರಂ ಅಂತ ಹೆಸರು ಹಿಡಿದು ಕೂಗ್ತಿದ್ದೀ?... ಹದಿನಾಲ್ಕು